ಇನ್ನೊಂದು ಅಂದಾಜು ಮಾಡಲಾಗಿದೆ. ಬೆಣ್ಣೆತೊರೆಗೆ ಸಂಬಂಧಪಟ್ಟಂತೆ ಎಸ್ಟಿಮೇಟ್ ಮಂಜೂರಾಗಿಲ್ಲ. ಈಗ ಮಂಜೂರಾತಿ ಪಡೆಯಲಿಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೬೦೦ ಕೋಟಿ ರೂಪಾಯಿಗಳನ್ನು ಇನ್ನು ೬ ವರ್ಷಕ್ಕೆ ಖರ್ಚು ಮಾಡುತ್ತೀರಿ. ಎಸ್ಕಲೇಷನ್ ಕಾಸ್ಟ್ ಎಷ್ಟಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಏತಕ್ಕೆ ಊಹೆ ಮಾಡಲಿ, ಮುಂದಿನ ವರ್ಷ ಸಿಮೆಂಟ್ ಮೂಟೆಗೆ ೮೫ ರೂಪಾಯಿ ಆಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀರಾವರಿ ವಿಚಾರದಲ್ಲಿ ಬಹಳ ಆಸ್ತೆ ಇರತಕ್ಕ ಮಾನುಷ್ಯರು ಬಂದಮೇಲೆ, ಯೋಜನೆಗಳ ಕೆಲಸ ಬೇಗ ಆಗುತ್ತವೆಂಬ ನಿರೀಕ್ಷೆ ಇತ್ತು.

ಲೋಕೋಪಯೋಗಿ ರಸ್ತೆಯನ್ನು ವಿಸ್ತರಣೆ

೮೫. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಜಿಲ್ಲೆಯ ಚೋಳನಾಯಕನಹಳ್ಳಿಯ ರಸ್ತೆ ಲೋಕೋಪಯೋಗಿ ಇಲಾಖೆಯ ಮುಖ್ಯ ರಸ್ತೆಯಾಗಿದ್ದರೂ ನಗರ ಸಾರಿಗೆ ಬಸ್ಸುಗಳು ಸರಾಗವಾಗಿ ಓಡಾಡಲು ಆಗದಿರುವುದಕ್ಕೆ ಕಾರಣಗಳೇನು ?

ಆ) ಹೆಬ್ಬಾಳ ಆಡ್ಡ ರಸ್ತೆಯಿಂದ ಚೋಳನಾಯಕನ ಹಳ್ಳಿವರೆಗಿನ ಲೋಕೋಪಯೋಗಿ ರಸ್ತೆಯನ್ನು ವಿಸ್ತರಿಸಲು ಸರ್ಕಾರದವರು ತಕ್ಷಣ ಕ್ರಮ ಕೈಗೊಳ್ಳುವುದೇ ?

ಇ) ಹಾಗಿದ್ದಲ್ಲಿ ಎಷ್ಟು ದಿನಗಳೊಳಗೆ ಈ ರಸ್ತೆಯನ್ನು ವಿಸ್ತರಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆಯು ಹಳ್ಳಿ ಶ್ರೇಣಿಗೆ ಸೇರಿದ್ದು ೧.೨ ಕಿ.ಮಿ ಉದ್ದವಿದೆ. ಈ ರಸ್ತೆಯ ಪೂರ್ತಿ ಉದ್ದಕ್ಕೆ ೩.೭೫ ಮೀ ಆಗಲಕ್ಕೆ ಡಾಮರು ಹಾಕಲಾಗಿದೆ. ಈ ರಸ್ತೆಯ ಮೇಲೆ ಈಗ ನಗರ ಸಾರಿಗೆ ಬಸ್ಸುಗಳು ಓಡಾಡುತ್ತಿವೆ.

ಆ) ಮತ್ತು ಇ) ೧೯೮೭–೮೮ರ ಸಾಲಿನಿಂದ ಹಳ್ಳಿ ಶ್ರೇಣಿಗೆ ಸೇರಿರುವ ರಸ್ತೆಗಳೆಲ್ಲಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತವೆ ಮತ್ತು ಬೆಂಗಳೂರು ನಗರ ಜಿಲ್ಲೆಗೆ ಇನ್ನೂ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಿಲ್ಲದಿರುವುದರಿಂದ ಈಗ ಈ ರಸ್ತೆಯು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಈ ರಸ್ತೆಯ ಅಭಿವೃದ್ಧಿ ವಿಷಯದಲ್ಲಿ ಮುಂದಿನ ಕ್ರಮವನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ನನ್ನ ಮೊದಲನೆಯ ಪ್ರಶ್ನೆಗೆ ಸಾರಿಗೆ ಬಸ್ಸುಗಳು ಓಡಾಡುತ್ತಿವೆ ಎಂದು ಹೇಳಿದ್ದಾರೆ, ಅದು ನಿಜ. ಆದರೆ ಆ ಬಸ್ಸುಗಳು ಬಹಳ ಕಷ್ಟದಲ್ಲಿ ಓಡಾಡುತ್ತಿವೆ. ಅಲ್ಲಿ ರಸ್ತೆ ಅಗಲ ಇಲ್ಲದೇ ಇರುವುದರಿಂದ, ಅಲ್ಲದೇ ಅನೇಕರು ಆ ಜಾಗದಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿರುವುದರಿಂದ, ಅಬ್ಸ್ಟ್ರಕ್ಷನ್ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಆ ರಸ್ತೆಯನ್ನು ಅಗಲ ಮಾಡಲಿಕ್ಕೆ ಶಿಫಾರಸು ಮಾಡುತ್ತೀರಾ ? ಆ ಬಗ್ಗೆ ಏನಾದರೂ ಯೋಚನೆ ಮಾಡುತ್ತಿರಾ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ನಿಮ್ಮ ಒಂದು ಒತ್ತಡದ ಮೇಲೆ ನಾಲ್ಕಾರು ವರ್ಷದಿಂದ ಹಣ ಖರ್ಚು ಮಾಡಿದ್ದೇವೆ. ೧೯೮೫–೮೪ ರಲ್ಲಿ ೯೯ ಸಾವಿರ ಚಿಲ್ಲರೆ ರೂಪಾಯಿಗಳು ಖರ್ಚಾಗಿದೆ, ೧೯೮೪–೮೫ರಲ್ಲಿ ಇಲ್ಲ, ೧೯೮೫–೮೬ ರಲ್ಲಿ ೨೧,೨೪೭ ರೂಪಾಯಿಗಳು ಖರ್ಚಾಗಿದೆ. ೧೯೮೬–೮೭ ರಲ್ಲಿ ೧,೦೬೭ ರೂಪಾಯಿಗಳು ಖರ್ಚಾಗಿದೆ. ನಮ್ಮ ಗಮನಕ್ಕೆ ಬರದೇ ಇದ್ದರೆ ಇಷ್ಟೊಂದು ಹಣ ಖರ್ಚು ಮಾಡಂತ್ತಾ ಇರಲಿಲ್ಲ. ಈಗ ಅದು ನಮ್ಮ ಅಧಿಕಾರ ವ್ಯಾಪ್ತಿಯಿಂದ ಇನ್ನೊಂದು ಕಡೆ ವರ್ಗವಾಗಿರುವುದರಿಂದ, ನೀವು ಹೇಳಿರುವ ವಿಷಯದ ಬಗ್ಗೆ ತೀವ್ರ ಗಮನಹರಿಸಿ ಎಂದು ಅವರಿಗೆ ನಾವು ಪತ್ರ ಬರೆಯುತ್ತೇವೆ.